# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಹೆಚ್. ರಸ್ತೆ, ತುಮಕೂರು – 572 103

ಸಂಖ್ಯೆ:ತು.ವಿ:ಖ.ಕೋ:2026–27/ 1674 ದಿನಾಂಕ:06.08.2026

## ದರಪಟ್ಟಿ ಆಹ್ವಾನ

ವಿಷಯ: ತುಮಕೂರು ವಿಶ್ವವಿದ್ಯಾನಿಲಯದ **ICSSR** ಸಂಶೋಧನೆ ಯೋಜನೆಯಡಿಯಲ್ಲಿ ಅಗತ್ಯವಿರುವ ಪೀಠೋಪಕರಣಗಳನ್ನು ಸರಬರಾಜು ಪಡೆಯಲು ದರಪಟ್ಟಿ ಆಹ್ವಾನಿಸಿರುವ ಕುರಿತು.

ಉಲ್ಲೇಖ:1. ಅಧ್ಯಕ್ಷರು, ಸ್ನಾತಕೋತ್ತರ ಇಂಗ್ಲಿಷ್ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತು.ವಿ.ತು ಇವರ ಮನವಿ ದಿನಾಂಕ: 20.07.2026.

2. ವಿ.ವಿ ಕಚೇರಿ ಆದೇಶ ಪತ್ರದ ಸಂಖ್ಯೆ: ತುವಿ:ಡಿಇವಿ–02ಸಂ.ಯೋ:2026–27/1447 ದಿನಾಂಕ:24.07.2026
3. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 01.08.2026 (ಕಂಡಿಕೆ–136)

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (01) ರ ಮನವಿಯ ಮೇರೆಗೆ, ತುಮಕೂರು ವಿಶ್ವವಿದ್ಯಾನಿಲಯದ **ICSSR** ಸಂಶೋಧನೆ ಯೋಜನೆಯಡಿಯಲ್ಲಿ ಅಗತ್ಯವಿರುವ ಪೀಠೋಪಕರಣಗಳನ್ನು ಸರಬರಾಜು ಪಡೆಯಲು ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಆಸಕ್ತ ನೋಂದಾಯಿತ ಸಂಸ್ಥೆಗಳಿಂದ ಈ ಕೆಳಕಂಡ ಕೋಷ್ಟಕದಲ್ಲಿ ವಿವರದಂತೆ ದರಪಟ್ಟಿಗಳನ್ನು ಆಹ್ವಾನಿಸಿದೆ.

| Sl. No. | Furniture | Quantity | Specification | Price |
|---|---|---|---|---|
| 1 | Office Table | 01 | Material : Wooden<br>Finishing : Polished<br>Storage Drawers : Yes<br>Table Thickness : 20 to 22 mm<br>Wood Type : Teak Wood<br>Termite Prood : Yes<br>Table Height : 3 - 4 Feet | |
| 2 | Nilkamal Chairs | 04 | **Primary Material:** High-quality, durable plastic<br>**Color:** Season Rust Brown<br>**Style:** Contemporary, modern woven/clean aesthetic<br>**Chair Dimensions:** Approx. 56.5 cm (W) x 61 cm (D) x 84 cm (H)<br>**Warranty:** 36 months domestic warranty covering parts replacement | |
| 4 | Book Rack (metal) | 02 | **Frame & Shelves:** Cold Rolled Close Annealed (CRCA) sheet or mild steel<br>**Gauge/Thickness:** 18 to 20 gauge for shelves; 16 to 18 gauge for upright columns and brackets<br>**Surface Finish:** Anti-scratch, rust-resistant epoxy powder coating (commonly grey, black, or white) [1, 2, 3, 4, 5]<br>Dimensions & Capacity<br>**Height:** 5.5 to 6 feet (approx. 66–72 inches)<br>**Width:** 33 to 35 inches (approx. 84–89 cm)<br>**Depth:** 12 inches (standard book clearance)<br>**Load Capacity:** 20 kg to 50 kg per individual shelf layer | |

(ಮು.ತಿ.ನೋ)

ಷರತ್ತುಗಳು:

1. ತಾವು ಸಲ್ಲಿಸುವ ದರಪಟ್ಟಿಯ ಮುಚ್ಚಿದ ಲಕೋಟೆಯ ಮೇಲೆ **"Quotation for Furniture to ICSSR Research Project "**ಎಂದು ನಮೂದಿಸತಕ್ಕದ್ದು.
2. **ದರಪಟ್ಟಿಯನ್ನು ಕುಲಸಚಿವರು, ವಿಶ್ವವಿದ್ಯಾನಿಲಯ ಕಾರ್ಯಾಲಯ, ತುಮಕೂರು ವಿಶ್ವವಿದ್ಯಾನಿಲಯ, ಬಿ.ಹೆಚ್.ರಸ್ತೆ ತುಮಕೂರು-572 103**, ಇವರಿಗೆ ಮುದ್ದಾಂ ಅಥವಾ ಅಂಚೆಯ ಮೂಲಕ ತಲುಪಿಸಬಹುದು. ಅಂಚೆಯ ವಿಳಂಬಕ್ಕೆ ಅಥವಾ ಅಂಚೆಯು ತಲುಪದಿದ್ದಕ್ಕೆ ವಿಶ್ವವಿದ್ಯಾನಿಲಯವು ಜವಾಬ್ದಾರರಾಗುವುದಿಲ್ಲ.
3. ದರಪಟ್ಟಿಯನ್ನು ಸಲ್ಲಿಸಲು ಕೊನೆಯ **ದಿನಾಂಕ: 17.08.2026 ಅಪರಾಹ್ನ 3.30 ಗಂಟೆ.**
4. ದರಪಟ್ಟಿ ಸಲ್ಲಿಸುವ ಸಂಸ್ಥೆಯವರು ತಮ್ಮ ಸಂಸ್ಥೆಯ GSTIN No. ಮತ್ತು PAN No. ದಾಖಲೆಗಳನ್ನು ದರಪಟ್ಟಿಯ ಜೊತೆಗೆ ಲಗತ್ತಿಸಬೇಕು.
5. ದರಪಟ್ಟಿಯ ಅವಧಿಯು ದರಪಟ್ಟಿಯನ್ನು ತೆರೆದ ದಿನಾಂಕದಿಂದ 90 ದಿನಗಳವರೆಗೆ ಚಾಲ್ತಿಯಲಿರುತ್ತದೆ.
6. ಸರಬರಾಜು ಮಾಡಲು ಯಾವುದೇ ಮುಂಗಡ ಹಣವನ್ನು ನೀಡಲಾಗುವುದಿಲ್ಲ.
7. ದರಪಟ್ಟಿಯಲ್ಲಿ ನಮೂದಿಸಿದ ದರಗಳು ತೆರಿಗೆ ಮೊತ್ತ ಮತ್ತು ಸಾಗಾಣಿಕೆ ಮೊತ್ತವನ್ನು ಒಳಗೊಂಡಿರಬೇಕು.
8. ದರಪಟ್ಟಿಯನ್ನು ಅಂಗೀಕರಿಸುವಾಗ ಸಂಸ್ಥೆಗಳು ಸಲ್ಲಿಸಿದ ದರಪಟ್ಟಿಗಳಲ್ಲಿನ ಅತೀ ಕಡಿಮೆ ದರವನ್ನು ಪರಿಗಣಿಸಲಾಗುವುದು.
9. ದರಪಟ್ಟಿಯಲ್ಲಿ ನಮೂದಿಸಿರುವ ಪ್ರಮಾಣವನ್ನು ಹೆಚ್ಚಿಸುವ ಅಥವಾ ಕಡಿಮೆಗೊಳಿಸುವ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿರುತ್ತದೆ.
10. ದರಪಟ್ಟಿಗಳನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಪೂರ್ಣ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ.
11. ದರಪಟ್ಟಿಗಳ ಆಯ್ಕೆಯ ವಿಷಯದಲ್ಲಿ ತುಮಕೂರು ವಿಶ್ವವಿದ್ಯಾನಿಲಯವು ರಚಿಸಿಕೊಂಡಿರುವ ನಿಯಮಾವಳಿಗೆ ಬದ್ಧವಾಗಿ ಆಯ್ಕೆಮಾಡಲಾಗುವುದು ಮತ್ತು ಇದರಲ್ಲಿ ವಿಶ್ವವಿದ್ಯಾನಿಲಯದ ತೀರ್ಮಾನವೇ ಅಂತಿಮವಾಗಿರುತ್ತದೆ.
12. ತಮ್ಮ ಸಂಸ್ಥೆಯು ಸರಬರಾಜು ಮಾಡಲು ಉದ್ದೇಶಿಸಿರುವ ಪೀಠೋಪಕರಣದ ಮಾದರಿಯ ಮಾಹಿತಿಯನ್ನು ದರಪಟ್ಟಿಯೊಂದಿಗೆ ಕಡ್ಡಾಯವಾಗಿ ಸಲ್ಲಿಸುವುದು.
13. ವಿಶ್ವವಿದ್ಯಾನಿಲಯವು ಅಪೇಕ್ಷಿಸಿದ್ದಲ್ಲಿ ಸರಬರಾಜು ಮಾಡುವ ಮುನ್ನ Furniture Equipment ನ ಮಾದರಿಗಳನ್ನು (Sample) ವಿಭಾಗದಲ್ಲಿ ಪ್ರದರ್ಶಿಸಿ, ಪರಿಶೀಲಿಸಿ ಒಪ್ಪಿಗೆ ಪಡೆದುಕೊಳ್ಳುವುದು.
14. ಪೀಠೋಪಕರಣವನ್ನು ಸರಬರಾಜು ಮಾಡುವ ಸಂದರ್ಭದಲ್ಲಿ ಯೋಜನಾ ನಿರ್ದೇಶಕರು, ICSSR Research Project ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರು ಪೀಠೋಪಕರಣದ ಮಾದರಿ ಮತ್ತು ಸಂರಚನೆಯನ್ನು ಪರಿಶೀಲಿಸಿ ಸರಬರಾಜು ಪಡೆಯತಕ್ಕದ್ದು.
15. ಷರತ್ತು ಬದ್ಧ ದರಪಟ್ಟಿಗಳನ್ನು ವಿಶ್ವವಿದ್ಯಾನಿಲಯವು ಪರಿಗಣಿಸಲಾಗುವುದಿಲ್ಲ.
16. ತಾವು ಸಲ್ಲಿಸುವ ದರಪಟ್ಟಿಯಲ್ಲಿ ಪೀಠೋಪಕರಣದ MAF/Authorized Dealer Certificateಅನ್ನು ದರಪಟ್ಟಿಯೊಂದಿಗೆ ಲಗತ್ತಿಸುವುದು.
17. ತಾವು ಸಲ್ಲಿಸುವ ದರಪಟ್ಟಿಯಲ್ಲಿ ಪೀಠೋಪಕರಣದ Warranty/Guarantee/AMC ಯ ಗರಿಷ್ಠ ಅವಧಿಯನ್ನು ನಮೂದಿಸುವುದು. ದರಗಳು ತೆರಿಗೆ ಮೊತ್ತವನ್ನು ಒಳಗೊಂಡಿರತಕ್ಕದ್ದು.
18. ಪ್ರತಿ ಸಂಸ್ಥೆಯವರು ಏಕೈಕ ದರಪಟ್ಟಿಯನ್ನು ಮಾತ್ರ ಸಲ್ಲಿಸತಕ್ಕದ್ದು.
19. ಸರಬರಾಜು ಆದೇಶದಲ್ಲಿ ನೀಡುವ ಎಲ್ಲಾ ಷರತ್ತುಗಳನ್ನು ಪಾಲಿಸಬೇಕು.
20. ಹೆಚ್ಚಿನ ವಿವರಗಳು ಅಥವಾ ಮಾಹಿತಿಯು ಅಗತ್ಯವಿದ್ದಲ್ಲಿ ಅಧ್ಯಕ್ಷರು, ಯೋಜನಾ ನಿರ್ದೇಶಕರು, ICSSR Research Project ತುಮಕೂರು ವಿಶ್ವವಿದ್ಯಾನಿಲಯ ತುಮಕೂರು ಇವರನ್ನು ಸಂಪರ್ಕಿಸಬಹುದು.

**ಆದೇಶದ ಮೇರೆಗೆ,**

ಉಪಕುಲಸಚಿವರು

ಉಪಕುಲಸಚಿವರು -08-26

ಖರೀದಿ ಕೋಶ

ತುಮಕೂರು ವಿಶ್ವವಿದ್ಯಾನಿಲಯ

ತುಮಕೂರು

ಪ್ರತಿಗಳು:

1. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಸಿಸ್ಟಂ ಅನಾಲಿಸಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. (ಇಂದೇ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು)
3. ಯೋಜನಾ ನಿರ್ದೇಶಕರು, ICSSR Research Project ತುಮಕೂರು ವಿಶ್ವವಿದ್ಯಾನಿಲಯ ತುಮಕೂರು.
4. ತುಮಕೂರು ವಿಶ್ವವಿದ್ಯಾನಿಲಯದ ಸೂಚನಾ ಫಲಕ.
5. ಕಚೇರಿ ಪ್ರತಿ.